# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **852**
2. ಸದಸ್ಯರ ಹೆಸರು : ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸುವ ದಿನಾಂಕ : **09.03.2021**
4. ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಹಾಗೂ ಸಕ್ಕರೆ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಸರ್ಕಾರಿ ಮತ್ತು ಖಾಸಗಿ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು); ಸರ್ಕಾರಿ ವ್ಯಾಪ್ತಿಯ ಎಷ್ಟು ಕಾರ್ಖಾನೆಗಳನ್ನು ಖಾಸಗಿ ಸಹಭಾಗಿತ್ವಕ್ಕೆ ನೀಡಲಾಗಿದೆ; ಯಾರಿಗೆ/ ಯಾವ ಸಂಸ್ಥೆಗೆ ನೀಡಲಾಗಿದೆ; ಲೀಸ್ ನೀಡಿದ್ದಲ್ಲಿ ಲೀಸ್‌ನ ಅವಧಿ ಎಷ್ಟು; (ವಿವರ ನೀಡುವುದು)</td><td>ಮಂಡ್ಯ ಜಿಲ್ಲೆಯಲ್ಲಿ 05 ಸಕ್ಕರೆ ಕಾರ್ಖಾನೆಗಳಿದ್ದು, ಇವುಗಳ ತಾಲ್ಲೂಕುವಾರು ವಿವರ ಕೆಳಕಂಡಂತಿವೆ.
<table>
<tr><th>ಕ್ರ. ಸಂ.</th><th>ವಲಯ</th><th>ತಾಲ್ಲೂಕು</th><th>ಕಾರ್ಖಾನೆಯ ಹೆಸರು</th></tr>
<tr><td>1</td><td>ಸರ್ಕಾರಿ ವಲಯ</td><td>ಮಂಡ್ಯ</td><td>ಮೈಸೂರು ಸಕ್ಕರೆ ಕಂಪನಿ ನಿ., ಮಂಡ್ಯ</td></tr>
<tr><td>2</td><td>ಸಹಕಾರಿ ಗುತ್ತಿಗೆ</td><td>ಪಾಂಡವಪುರ</td><td>ಮೆ॥ ನಿರಾಣಿ ಶುಗರ್ಸ್ ಲಿ. (ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು)</td></tr>
<tr><td>3</td><td>ಖಾಸಗಿ ವಲಯ</td><td>ಮದ್ದೂರು</td><td>ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿ., ಭಾರತಿನಗರ,</td></tr>
<tr><td>4</td><td>ಖಾಸಗಿ ವಲಯ</td><td>ಮದ್ದೂರು</td><td>ಎನ್.ಎಸ್.ಎಲ್. (ಎಸ್.ಸಿ.ಎಂ) ಶುಗರ್ಸ್ ಲಿ.,ಕೊಪ್ಪ,.</td></tr>
<tr><td>5.</td><td>ಖಾಸಗಿ ವಲಯ</td><td>ಕೆ.ಆರ್.ಪೇಟೆ</td><td>ಕೋರಮಂಡಲ್ (ಐ.ಸಿ.ಎಲ್.) ಶುಗರ್ಸ್ ಲಿ., ಮಾಕವಳ್ಳಿ,</td></tr>
</table>
ಸರ್ಕಾರದ ಆದೇಶ ಸಂಖ್ಯೆ: ಸಿಐ 54 ಸಿಓಎಫ್ 2020 ದಿನಾಂಕ:04.07.2020ರನ್ವಯ ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು 2020-21ನೇ ಸಾಲಿನಿಂದ 40 ವರ್ಷಗಳ ಅವಧಿಗೆ ಎಲ್.ಆರ್.ಓ.ಟಿ. (Lease Rehabilitate Operate Transfer) ಆಧಾರದ ಮೇಲೆ "ಇದ್ದಲ್ಲಿ ಇದ್ದಂತೆಯೇ" (As is where is basis) ಮೆ|| ನಿರಾಣಿ ಶುಗರ್ಸ್ ಲಿ., ಮುಧೋಳ , ಬಾಗಲಕೋಟೆ ಜಿಲ್ಲೆ ಇವರಿಗೆ ರೂ.405.00 ಕೋಟಿಗಳಿಗೆ ಗುತ್ತಿಗೆ ನೀಡಲಾಗಿದೆ.</td></tr>
<tr><td>(ಆ)</td><td>ಮಂಡ್ಯ ಸಕ್ಕರೆ ಕಾರ್ಖಾನೆ ಪ್ರಾರಂಭ ವಾಗುವುದು ಯಾವಾಗ; ಈ ಹಿಂದಿನ ಸರ್ಕಾರ ಕಾರ್ಖಾನೆ ಪ್ರಾರಂಭಿಸಲು ಕ್ರಿಯಾಯೋಜನೆ ಸಿದ್ಧಪಡಿಸಿ ಪ್ರಾರಂಭ ಮಾಡಲು ಅಗತ್ಯ ಅನುದಾನ ಬಿಡುಗಡೆ ಮಾಡಲಾಗಿದ್ದರೂ ಸಕ್ಕರೆ ಕಾರ್ಖಾನೆ ಪ್ರಾರಂಭಿಸದಿರಲು ಕಾರಣವೇನು;</td><td>ಸರ್ಕಾರಿ ಸ್ವಾಮ್ಯದ ಮೈಸೂರು ಸಕ್ಕರೆ ಕಂಪನಿ ಲಿ.,ಮಂಡ್ಯ ಜಿಲ್ಲೆ - ಈ ಕಾರ್ಖಾನೆಯನ್ನು 2021-22ನೇ ಹಂಗಾಮಿನಿಂದ 40 ವರ್ಷಗಳ ಅವಧಿಗೆ ಎಲ್.ಆರ್.ಓ.ಟಿ. (Lease Rehabilitate Operate Transfer) ಆಧಾರದ ಮೇಲೆ "ಇದ್ದಲ್ಲಿ ಇದ್ದಂತೆಯೇ" (As is where is basis) ಖಾಸಗಿಯವರಿಗೆ ಗುತ್ತಿಗೆ ನೀಡಲು ಸರ್ಕಾರದ ಆದೇಶ ಸಂಖ್ಯೆ:ಸಿಐ 05 ಸಿಓಎಫ್ 2020 ದಿನಾಂಕ:18.11.2020ರಲ್ಲಿ ಅನುಮತಿ ನೀಡಿದೆ. ಈ ಸಂಬಂಧ ಟೆಂಡರ್ ಕರೆಯಲು ಟೆಂಡರ್ ಡಾಕ್ಯುಮೆಂಟ್ ಮತ್ತು ಒಡಂಬಡಿಕೆ ಪತ್ರಗಳನ್ನು ಸಿದ್ಧಪಡಿಸಲಾಗುತ್ತಿದ್ದು, ಯಶಸ್ವಿ ಬಿಡ್ಡುದಾರರು 2021-22ನೇ ಹಂಗಾಮಿನಿಂದ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸುವಂತೆ ಷರತ್ತು ವಿಧಿಸಲಾಗುತ್ತಿದೆ.<br>2019-20ನೇ ಸಾಲಿನಿಂದ ಮೈಸೂರು ಸಕ್ಕರೆ ಕಾರ್ಖಾನೆಗೆ ದುಡಿಯುವ ಬಂಡವಾಳವನ್ನು ಸರ್ಕಾರದಿಂದ ಬಿಡುಗಡೆಗೊಳಿಸಿರುವುದಿಲ್ಲ. ಆರ್ಥಿಕ ಸಂಕಷ್ಟದಿಂದಾಗಿ ಕಾರ್ಖಾನೆಯಲ್ಲಿ ದುಡಿಯುವ ಬಂಡವಾಳದ ಕೊರತೆಯುಂಟಾಗಿ ಕಾರ್ಖಾನೆಯನ್ನು ಪ್ರಾರಂಭಿಸಿರುವುದಿಲ್ಲ.</td></tr>
</table>

| | | |
|---|---|---|
| (ಇ) | ಈ ಭಾಗದಲ್ಲಿ ರೈತರು ಬೆಳೆಯುವ ಕಬ್ಬನ್ನು ಪ್ರಸ್ತುತ ಯಾವ ರೀತಿಯಲ್ಲಿ ವಿಲೆ ಮಾಡಲು ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು) | ಮೈಸೂರು ಸಕ್ಕರೆ ಕಂಪನಿ, ಮಂಡ್ಯ ಈ ಕಾರ್ಖಾನೆಯ ಮೀಸಲು ಕ್ಷೇತ್ರದ ವ್ಯಾಪ್ತಿಯಲ್ಲಿ ರೈತರು ಬೆಳೆದ ಕಬ್ಬನ್ನು ನೆರೆಯ ಸಕ್ಕರೆ ಕಾರ್ಖಾನೆಗಳಾದ ಐ.ಸಿ.ಎಲ್. ಶುಗರ್ಸ್ ಕೆ.ಆರ್.ಪೇಟೆ, ಎನ್.ಎಸ್.ಎಲ್. ಶುಗರ್ಸ್ ಕೊಪ್ಪ, ಚಾಮುಂಡೇಶ್ವರಿ ಶುಗರ್ಸ್ ಕೆ.ಎಂ.ದೊಡ್ಡಿ, ಬನ್ನಾರಿ ಅಮ್ಮನ್ ಶುಗರ್ಸ್ ಕಾರ್ಖಾನೆಯ ಅಳಗಂಚಿ, ಕುಂತೂರು ಮತ್ತು ತಮಿಳುನಾಡಿನ ಸತ್ಯಮಂಗಲಂ ಘಟಕಗಳಿಗೆ ಹಂಚಿಕೆ ಮಾಡಲು ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಇವರು ಕ್ರಮಕೈಗೊಂಡಿರುತ್ತಾರೆ. |
| (ಈ) | ಕಬ್ಬು ಬೆಳೆದು ನಷ್ಟದಲ್ಲಿರುವ ರೈತರಿಗೆ ವಿಶೇಷ ಪ್ಯಾಕೇಜ್ ಅಥವಾ ಪರಿಹಾರ ಘೋಷಣೆ ಮಾಡಲಾಗಿದೆಯೇ; ಹಾಗಿದ್ದರೆ, ಈವರೆವಿಗೆ ಎಷ್ಟು ಫಲಾನುಭವಿಗಳಿಗೆ ಪರಿಹಾರದ ಮೊತ್ತ ವಿತರಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು) | ಕಬ್ಬು ಬೆಳೆದು ನಷ್ಟದಲ್ಲಿರುವ ರೈತರಿಗೆ ಯಾವುದೇ ವಿಶೇಷ ಪ್ಯಾಕೇಜ್ ಅಥವಾ ಪರಿಹಾರ ಘೋಷಣೆ ಮಾಡಿರುವುದಿಲ್ಲ. |

ಸಂಖ್ಯೆ: ಸಿಐ 17 ಎಸ್‌ಜಿಎಫ್ 2021

(ಎನ್. ನಾಗರಾಜು.ಎಂ.ಟಿ.ಬಿ.)
ಪೌರಾಡಳಿತ ಮತ್ತು ಸಕ್ಕರೆ ಸಚಿವರು.